ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಟಿ. ಸಿ. ವಿಚ್. ತರಬೇತಿ ಹೊಂದಿದವರಿಗೆ ನೌಕರಿ ಕೊಡುವಾಗ ಪ್ರಾಶಸ್ತ್ಯ ಕೊಡುತ್ತೀರಾ ?

ಶ್ರೀ ಬಿ, ರಾಚಯ್ಯ.—ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡುವಾಗಲೇ ಅವರಿಗೆ ಆದ್ಯತೆ ಕೊಡುತ್ತಿದ್ದೇವೆ.

ಅಧ್ಯಕ್ಷರು.—ಪ್ರತಾಪಚಂದ್ರಶೆಟ್ಟರೇ, ತಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಮಯ ಬೇಕು ಎಂದು ಕೇಳಿದ್ದಾರೆ. ಆದ್ದರಿಂದ ಇದನ್ನು ಮುಂದಕ್ಕೆ ಹಾಕಿದ್ದೇನೆ.

ಪ್ರಶ್ನೆ ಸಂಖ್ಯೆ.—591 (1093)
ಸದಸ್ಯರು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ.—592 (1114)
ಸದಸ್ಯರು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ.—593 (1233)
ಸದಸ್ಯರು ಹಾಜರಿರಲಿಲ್ಲ.

ವಿಷಯ :—ಚಪ್ಪೆರೋಗದಿಂದ ಕುರಿಗಳ ಸಾವು

ಪ್ರ. ಸಂಖ್ಯೆ 591 (1093) ಶ್ರೀ. ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)*.—ಮಾನ್ಯ ಸಂಗೋಪನಾ ಪಶು ವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ. ಕರ್ನಾಟಕ ರಾಜ್ಯದಲ್ಲಿ ಮೈಲಿ ಬೇನೆಯಿಂದ ಕುರಿಗಳು ಸಾಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

ಆ. ಕುರಿಗಳಿಗೆ ಸಂಭವಿಸುತ್ತಿರುವ ಸದರಿ ಬೇನೆಯಿಂದ ರಾಜ್ಯದಲ್ಲಿ ಕುರಿಸಾಕಣಿಕೆದಾರರಿಗೆ ಆದ ಕುರಿಗಳ ನಷ್ಟದ ಸಂಖ್ಯೆ ಎಷ್ಟು ಹಾಗೂ ಬೆಲೆ ಎಷ್ಟು :

ಇ. ಪ್ರತಿ ಜಿಲ್ಲೆಯಲ್ಲಿ ಈ ಬಗ್ಗೆ ಪಶುಸಂಗೋಪನಾ ಇಲಾಖೆಯಲ್ಲಿ ಪ್ರತಿಬಂಧಕ ಚುಚ್ಚುಮದ್ದು ಇಲ್ಲದಿರುವುದು ನಿಜವೆ ;

ಈ. ನಷ್ಟವಾದ ಸಾಕಣಿದಾರರಿಗೆ ಬ್ಯಾಂಕಿನಲ್ಲಿ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನ, ಪಶುವೈದ್ಯಕೀಯ, ಹಾಗೂ ತೋಟಗಾರಿಕೆ ಸಚಿವರು):—

ಅ. ಬಂದಿದೆ.

ಆ. ಏಪ್ರಿಲ್ 1983 ರಿಂದ ಡಿಸೆಂಬರ್ 1983ರ ವರೆಗೆ ಮೈಲಿಬೇನೆಯಿಂದ ಸತ್ತ ಕುರಿಗಳ ಸಂಖ್ಯೆ : 74 ಅಂದಾಜು ಬೆಲೆ ರೂ. 14, 800 (ಕುರಿ ಒಂದಕ್ಕೆ 200.00 ರೂ. ಗಳ ಪ್ರಕಾರ)

ಇ. ನಿಜವಲ್ಲ.

ಈ. ಬ್ಯಾಂಕಿನಿಂದ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವ ಯೋಚನೆಯೂ ಇಲ್ಲ. ಆದರೆ ಬ್ಯಾಂಕಿನಿಂದ ಸಾಲ ಪಡೆಯುವಾಗ ಸದರಿ ಪ್ರಾಣಿಗಳ ಜೀವವಿಮೆ ಮಾಡಿಸಿರುತ್ತಾರೆ. ಆದ್ದರಿಂದ, ಅನುಭವದಾರರಿಗೆ ಆರ್ಥಿಕ ತೊಂದರೆ ಯಾಗುವುದಿಲ್ಲ.

ವಿಷಯ :—ಆಫಜಲ್‌ಪುರ ಟೌನಿನಲ್ಲಿ ಕಿರಿಯ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸುವುದು

ಪ್ರ. ಸಂಖ್ಯೆ 592 (1114) ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್)* ಮಾನ್ಯ ಶಿಕ್ಷಣಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಆಫಜಲ್‌ಪುರ ನಗರದಲ್ಲಿ ಕಿರಿಯ ತಾಂತ್ರಿಕ ವಿದ್ಯಾಲಯ ಪ್ರಾರಂಭಿಸಲು ಖಾಸಗಿ ಸಂಸ್ಥೆಯವರು ಮುಂದೆ ಬಂದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ